Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

22—1—1962

ಸರ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಮನುಷ್ಯರ ರವಾನೆ ಇಲ್ಲ !

ಲಂಡನ್ನಿನಿಂದ ವಾರ್ತೆ ಬಂದಿದೆ ಬ್ರಿಟನ್ನಿನಲ್ಲಿ ಅಂಚೆ ಇವಾನೆ ತಡವಾಗುತ್ತಿದೆಯಂತೆ ಅದನ್ನು ಪ್ರತಿಭಟಿಸಿ ತನ್ನನ್ನೇ ಅಂಚೆಯ ಮೂಲಕ ಭಾರಿಯಾಗಿ ರವಾನಿಸಬೇಕೆಂದು ಮೊನ್ನೆ ಗೆಂಟ್ಲೂಡ ಉಡ್ ಎಂಬಾಕೆ ಲಂಡನ್ನಿನ ಅಂಚೆ ಕಚೇರಿಗೆ ಹೋದಳು ಮನುಷ್ಯನನ್ನು ಭಾರಿಯಾಗಿ ಸ್ವೀಕರಿಸುವದಿಲ್ಲವೆಂದು ಅಂಚೆ ಕಚೇರಿಯವರು ಆಕೆಗೆ ತಿಳಿಸಿದರು

ಪ್ರಧಾನ ಕಚೇರಿ ನಾಶ

ರಾಜತ್ವ ವಿರೋಧಿಗಳ ಗುಂಪು ನೇಪಾಳದಲ್ಲಿ ವಹೋತರಾಯಿನ ಜಾಲೇಶ್ವರ ಜಿಲ್ಲ ಪ್ರಧಾನ ಕಚೇರಿಯನ್ನು ಡೈನಾಮೈಟ್‌ನಿಂದ ಹೊಡೆದು ನಾಶಪಡಿಸಿದರೆಂದು ನೇಪಾಳ ಕಾಂಗ್ರೆಸಿನ ವೃತ್ತಗಳಿಂದ ಗೊತ್ತಾಗಿದೆ ಎಂದು ಬಿಹಾರಿನ ಸೀತಾಮಾರ್ಹಿಗೆ ವಾರ್ತೆ ಬಂದಿದೆ

ಅಧ್ಯಕ್ಷರಿಗೆ ವಿಶ್ರಾಂತಿ

ನವ ದೆಹಲಿಯಿಂದ ಬಂದಿರುವ ವಂದಿಯಂತೆ ನೇಪಾಳದಲ್ಲಿ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರಿಗೆ ವಿಶ್ರಾಂತಿಬೇಕೆಂದು ಅವರ ವೈದ್ಯರು ಸಲಹೆ ಮಾಡಿರುವರು ಅವರ ಕಣ್ಣಿನ ಮಾಂಸಖಂಡಗಳು ದುರ್ಬಲವಾಗಿವೆ

ಕ್ರಿಕೆಟ್ ಪಂದ್ಯ

ಪ್ರಸಿದ್ಧ ಸಿನಿಮಾ ನಟರುಗಳಾದ ದಿಲೀಪ್ ಕುಮಾರ್ ಮತ್ತು ರಾಜಕಪೂರ್ ಇವರ ಟೀಂಗಳಿಗೆ ಈ ಮಾಹೆ 28 ರಂದು ಬೊಂಬಾಯಿನಲ್ಲಿ ಕ್ರಿಕೆಟ್ ಪಂದ್ಯ ನಡೆಯಲಿದೆ

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಕ್ಕಮ್ಮಜೋಯಿಸರಿಂದ

23 ಶತೀಯ ಮುಖ

★

ಹಿಮಾಚಲ ಪ್ರದೇಶದಲ್ಲಿ ಮಂಜುದೀಳುವದು ಹೆಚ್ಚಾಗಿದೆ.

ಮಹಿಳೆಯರ ಕಾಲೇಜಿನ ಮೇಲೆ ದಾಳಿ

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ನೀತಿಯನ್ನು ಪ್ರತಿಭಟಿಸಿ ಮುಷ್ಕರಿಸಿರುವ ತಿರುಪತಿ ಕಾಲೇಜಿನ ವಿದ್ಯಾರ್ಥಿವೃಂದ ಪದ್ಮಾವತಿ ಮಹಿಳಾ ಕಾಲೇಜಿನ ಮೇಲೆ ನೊನ್ನೆ ದಾಳಿ ಮಾಡಿ ರೂ 5 ಸಹಸ್ರ ನಷ್ಟಗೊಳಿಸಿದರು

ಮಕ್ಕಳಿಗೆ ಊಟ

1 ಲಕ್ಷ 70 ಸಾವಿರ ಮಕ್ಕಳಿಗೆ 160 ದಿವಸಗಳು ವರ್ಧಾಹ್ನದ ಊಟ ಒದಗಿಸಲು ರೂ 22 ಲಕ್ಷ ವೆಚ್ಚದ ಯೋಜನೆ ಶಿವಮೊಗ್ಗಾದಲ್ಲಿ ಸಿದ್ಧವಾಗಿದೆ.

ಸ್ಮಾರಕ ನಿರ್ಮಾಣ

7 ನೇ ಶತಮಾನದಲ್ಲಿ ಭಾರತಕ್ಕೆ ಸಂದರ್ಶನ ಇತ್ತಿದ್ದ ಚೀನಾ ಪಂಡಿತ ಹಿಯುನ್‌ತ್ಸಾಂಗನ ಸ್ಮಾರಕವನ್ನು ನಲಂದದ 48 ಎಕರೆ ಭೂಪ್ರದೇಶದಲ್ಲಿ ನಿರ್ಮಿಸಲಾಗುವದು

ಂಂ

ಶವ್ಯ ಉದ್ಯಮವನ್ನು ತಿಳಿದ ಸತ್ಯವಂತ ಹಾಗೂ ನಿದರ್ಶಕ್ಕೆಣ್ಣ ಜನರು, ಕೇವಲ ಮಾತುಗಾರರು ಹಾಗೂ ರಾಜಕೀಯದವರಿಗಿಂತ ಶಾಸನ ಸಭೆಗಳು ಹಾಗೂ ಪಾರ್ಲಿಮೆಂಟು ಪ್ರವೇಶಿಸುವದು ಉತ್ತಮವೆಂದು ರಾಜಾಜಿ ನುಡಿದರು

ರಾಜಾಜಿಯವರು ಬೆಂಗಳೂರಿಗೆ ನಿನ್ನೆ ಬಂದರು ಕೊಯಮ್ಮತ್ತೂರಿಗೆ ತೆರಳಿದರು.

ಟಿಹರಿಯಾನಲ್ಲಿ ವಿದ್ಯಾರ್ಥಿಗಳಿಗೆ ರೈಲ್ವೆ ಪಾಸ್ ಪಡೆಗೆ ಹೊಡೆದಾಟವಾಗಿದೆ.

ಚಂದ್ರಗ್ರಹದಲ್ಲಿರುವ ಇದ್ದೂ ತಿಳಿಯದಿರುವ ಉತ್ಪಾದನೆಗಳ ಶೋಧನೆಗೆ ಚಂದ್ರಗ್ರಹದಲ್ಲಿ ಕೈಗಾರಿಕೆ ಯಂತ್ರ ಸ್ಥಾಪಿಸುವದಾಗಿ ರಷ್ಯದ ಬಾಹ್ಯಾಂತರಜ್ಞರು ಮಾಸ್ಕೋದಲ್ಲಿ ತಿಳಿಸಿದರು

ಸುಪ್ರಸಿದ್ಧ ಸಿನಿಮಾ ತಾರೆ ನಹಿದಾ ರೆಹಮಾನ್ ಹೈದರಾಬಾದಿನ ನವಾಬರೋರ್ವನನ್ನು ವಿವಾಹವಾಗಿ, ಚಿತ್ರರಂಗವನ್ನು ಬಿಡುವರೆಂಬ ಸುದ್ದಿ ಇದೆ.

ಜರೂರು ಪರಿಸ್ಥಿತಿ ಬಂದರೆ ತನ್ನ ಬಳಿ ಇರುವ ಅಮೇರಿಕಾದ ಆಯುಧ ಬಳಸಲು ಹಿಂಜರಿಯುವದಿಲ್ಲವೆಂದು ಪಾಕಿಸ್ತಾನ ಅಧ್ಯಕ್ಷ ಅಯೂಬಖಾನರು ಕರಾಚಿಯಲ್ಲಿ ತಿಳಿಸಿದರು.

ಧರ್ಮವನು ಆಚರಿಸಿರಿ

ಂಂ

ಶ್ರೀ ಶೃಂಗೇರಿ ಜಗದ್ಗುರುಗಳವರ ಕರೆ

ಶ್ರೀ ಶೃಂಗೇರಿ ಜಗದ್ಗುರುಗಳವರಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಜಿಯವರು 20 ನೆಯ ತಾ|| ಸಂಜೆ ವೈಸೂರಿನಲ್ಲಿರುವ ಶ್ರೀ ಅಭಿನವ ಶಂಕರಾಲಯದಲ್ಲಿ ಪತ್ರಿಕೆಯವರಿಗೆ ಸಂದರ್ಶನವನ್ನಿತ್ತರು.

ಅಪ್ಪಗ್ರಹಕೂಟದ ವಿಷಯದಲ್ಲಿ ಶ್ರೀ ಶ್ರೀಗಳವರು ಮಾತನಾಡುತ್ತಾ, ಅಪ್ಪಗ್ರಹ ಕೂಟಗಳ ಸೇರುವಿಕೆಯು ಬಗ್ಗೆ ಯಾರೂ ಭೀತರಾಗಬೇಕಾದುದಿಲ್ಲ ಎಂದರು. ಧರ್ಮದಿಂದ ನಡೆಯುವವರಿಗೆ ಯಾವ ಭಯವೂ ಇಲ್ಲ. ಅಪ್ಪಗ್ರಹಕೂಟಗಳು ಸೇರುವಿಕೆ ಒಂದು ಎಚ್ಚರಿಕೆಯಾಗಿದೆ, ಅಧರ್ಮ ಮಾರ್ಗದಲ್ಲಿದ್ದರೆ ಧರ್ಮ ಮಾರ್ಗಕ್ಕೆ ಮನುಷ್ಯರು ಬರಬೇಕು ಎಂದರು.

ವಿತ್ತಾಂತರ ಪ್ರಶ್ನೆಯನ್ನು ಕುರಿತು ಶ್ರೀ ಶ್ರೀಯವರು ಮಾತನಾಡುತ್ತಾ, ಪ್ರಲೋಭನದಿಂದ ಮತಾಂತರವಾದವರನ್ನು ಮತ್ತೆ ಮತಕ್ಕೆ ಸೇರಿಸಿಕೊಳ್ಳುವುದಕ್ಕೆ ಶಾಸ್ತ್ರದಲ್ಲಿ ಸಮ್ಮತಿವಿದೆ ಎಂದು ತಿಳಿಸಿ, ಮತಾಂತರಗೊಂಡವನು ಗೋಮಾಂಸ ಭಕ್ಷಣ ಮಾಡಿದ್ದಿರಬೇಕೆಂದು ತಿಳಿಸಿದರು.

ಬುದ್ಧಿಪೂರ್ವಕವಾಗಿ ಮತಾಂತರ ಆದವನನ್ನು ಮತ್ತೆ ಮತಕ್ಕೆ ಸೇರಿಸಿಕೊಳ್ಳಲು ಆಗುವುದಿಲ್ಲವೆಂದು ನುಡಿದರು.

ರಾಜ್ಯ ಧಾರ್ಮಿಕ ರಾಜ್ಯ ಆಗಬೇಕೆಂದು ಶ್ರೀ ಶ್ರೀಯವರು ನುಡಿದರು. ಆದರೆ ರಾಜ್ಯದಲ್ಲಿ ವಾಸಿಸುವ ಪರಮತದವರ ವಿಷಯದಲ್ಲಿ ಸಹನೆ ಇರಬೇಕೆಂದು ಬುದಾಗಿ ಅವರು ನುಡಿದರು.

ವಿವಾಹ ಸಂಪ್ರದಾಯಗಳು ಧಾರ್ಮಿಕ ಪ್ರಧಾನವಾದುದೆಂದು ಅವರು ನುಡಿದು, ಪಾಶ್ಚಾತ್ಯ ರೀತಿಯ ಅನುಕರಣೆಗಳು ಕರವಾದುದಲ್ಲವೆಂದು ಅವರು ನುಡಿದರು.

ಭಾವೈಕ್ಯತೆಯನ್ನು ಕುರಿತು ಶ್ರೀ ಶ್ರೀಯವರನ್ನು ಕುರಿತು ಪ್ರಶ್ನೆಗಳನ್ನು ಅವರು ಉತ್ತರಕೊಡುತ್ತಾ, ಆ ವಿಷಯದಲ್ಲಿ ಈಗ ಆಗುತ್ತಿರುವುದೆಂದರೆ ಬರೀ ಶಬ್ದಗಳು ಎಂದು ನುಡಿದರು. ಭಾವೈಕ್ಯತೆ ನಮ್ಮಲ್ಲಿ ಇರಲಿಲ್ಲವೇ ? ಎಂದು ಶ್ರೀ ಶ್ರೀಯವರು ಪ್ರಶ್ನಿಸಿ ಸಮಂಜಸವಾದ ಉತ್ತರವನ್ನಿತ್ತರು ಪಂಜಾಬಿನಿಂದ ರಾಮೇಶ್ವರಕ್ಕೆ ಬಂದು ಸಮುದ್ರದಲ್ಲಿ ಸ್ನಾನ ಮಾಡಿ, ನಾನು ರಾಮೇಶ್ವರದಲ್ಲಿ ಸ್ನಾನ ಮಾಡಿದೆ ಎಂದು ಹೆಮ್ಮೆಯಿಂದ ನುಡಿಯುತ್ತಿದ್ದರು ನಾವು ಕಾಶಿಗೆ ಹೋಗಿ ಸ್ನಾನಮಾಡುತ್ತಿದ್ದೆವು ಬದರಿಗೆ ಹೋದರೆ ನಮ್ಮನ್ನು ಬೇರೆಯವರೆಂದು ಕಾಣುತ್ತಿರಲಿಲ್ಲ, ಇದಕ್ಕಿಂತ ಭಾವೈಕ್ಯತೆ ಬೇಕೆ ? ಎಂದು ಶ್ರೀ ಶ್ರೀಯವರು ನುಡಿದರು. ಈಗ ನಡೆಯುತ್ತಿರುವುದು ಓಟುಗಳಿಗಾಗಿ. ಭಾಷೆ ಭಾಷೆಗಳವರು ಜಗಳವಾಡುತ್ತಿಲ್ಲವೆ ? ಭಾಷೆಯ ರಾಜ್ಯಗಳು ಬಂದವ ಮೊದಲು ಭಾಷೆಗಳು ಅಭಿವೃದ್ಧಿಯಾಗಿರಲಿಲ್ಲವೇ ? ಮಹಾ ಮಹಾ ಕವಿಗಳು ಇರಲಿಲ್ಲವೆ ? ಎಂದರು.

ವೈಸೂರು ಶ್ರೀಮನ್ಮಹಾರಾಜರು ಧರ್ಮಪರರು. ಪ್ರಜೆಗಳು ಕೂಡ ಧರ್ಮಪರರೆಂಬುದು ವ್ಯಕ್ತವಾಗುತ್ತದೆ ಎಂದು ಅವರು ನುಡಿದರು

ಶ್ರೀ ಶ್ರೀಯವರು ಸಂಭಾಷಿಸುತ್ತಾ, ಸರ್ವರೂ ಧರ್ಮಾಚರಣೆಯಲ್ಲಿ ನಿರತರಾಗಿ ಇಹಪರಗಳಲ್ಲಿ ಸೌಖ್ಯ ಪಡೆಯಬೇಕೆಂಬುದಾಗಿ ತಿಳಿಸಿದರು.

ವರ್ಣಾಶ್ರಮ ಧರ್ಮವೇ ಉತ್ತಮವೆಂದ ಶ್ರೀ ಶ್ರೀಯವರು ನುಡಿದು ಅದರಲ್ಲಿ ಕೀಳು ಮೇಲು ಇಲ್ಲ ಎಂದರು

× ಅಮೆರಿಕಾ ಅಧ್ಯಕ್ಷ ಕೆನೆಡಿಯವರ ಪತ್ನಿ ಶ್ರೀಮತಿ ಕೆನೆಡಿ ಮಾರ್ಚ್ ತಿಂಗಳಿಗೆ ಭಾರತಕ್ಕೆ ಆಗಮಿಸುವರು.

ವಾರ್ತಾತರಂಗ

ಮೈಸೂರು ರಾಜ್ಯದ ತೂಲ್ಲೋಕ. ಬೋರ್ಡುಗಳ ಅಧ್ಯಕ್ಷರ ಸಮ್ಮೇಳನವು ಮಾರ್ಚಿ ತಿಂಗಳಲ್ಲಿ ಮೈಸೂರಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ

ಬಳ್ಳಾರಿ— ಚುನಾವಣೆಗೆ ಅಭ್ಯರ್ಥಿಗಳನ್ನು ಆರಿಸಿರುವದು ಅತೃಪ್ತಿಕರವಾಗಿರುವುದೆಂದು 7 ಮಂದಿ ಕಾಂಗ್ರೆಸಿಗರು ಕಾಂಗ್ರೆಸ್ಸು ಪಾರ್ಟಿಗೆ ರಾಜೀನಾಮೆ ಕೊಟ್ಟಿರುವರು.

ಬೊಂಬಾಯಿ— ಸಾಂತಾಕ್ರೂಜಿನಲ್ಲಿಳಿದ, ವೈಡೂಟಿನಿಂದ ಬಂದ ಪ್ರಯಾಣೀಕನ ಹತ್ತಿರದ್ದ-ಅಲಂಕಾರವಾಗಿದ್ದ ಗಡಿಯಾರವನ್ನು ಕಸ್ಟಮ್ಸಿನವರು ವಶಪಡಿಸಿಕೊಂಡರು ; ಅದರ ಎಲ್ಲ ಪದಾರ್ಥಗಳೂ ಬಂಗಾರದ್ದಾಗಿದೆ.

ಲಕ್ನೌ— ಉತ್ತರ ಪ್ರದೇಶದಲ್ಲಿ ಚುನಾವಣೆಗೆ ನಾಮಕರಣಪತ್ರ ಸಲ್ಲಿಸಲು ಇಚ್ಛೆಪಟ್ಟಿದ್ದ ಒಂದು ಡಜನ್ನಿಗಿಂತ ಹೆಚ್ಚು ಮಂದಿ ತಮ್ಮ ಹೆಸರು ವೋಟರು ಪಟ್ಟಿಯಲ್ಲಿ ಇಲ್ಲದಿದ್ದರಿಂದ ತೆಪ್ಪಗಾಗಬೇಕಾಯಿತು : ಇವರಲ್ಲಿ ಒಬ್ಬರೂ ಒಬ್ಬರೂ ಕಾಂಗ್ರೆಸ್ಸು ಅಭ್ಯರ್ಥಿಗಳಲ್ಲವೆಂದೂ, ಹೆಚ್ಚು ಮಂದಿ ವಿರೋಧ ಪಕ್ಷದವರೆಂದೂ ಹೇಳಲಾಗಿದೆ.

ಬೊಂಬಾಯಿ— ಪಾಕಿಸ್ತಾನವು ಅಕ್ರಮಣದಿಂದ ಹಿಂದುರುಗಬೇಕೆಂದೂ, ಯುದ್ಧಸ್ತಂಭ ರೇಖೆಯನ್ನು ಅತಿಕ್ರಮಿಸಿದರೆ ಭಾರತವು ಪ್ರತೀಕಾರ ಮಾಡುವುದೆಂದೂ ರಕ್ಷಣಾ ಮಂತ್ರಿ ಕೃಷ್ಣಮೆನನ್ ಹೇಳಿದರು

ಪಂಜಿಂ— ಸುಮಾರು 20 ಸಾವಿರ ಸರ್ಕಾರಿ ನೌಕರರು (ಮಾಜಿ ಪೋರ್ಚುಗೀಸು ಸರ್ಕಾರದ ಗುಮಾಸ್ತರು, ಪೋಲೀಸರು, ಇತರ ಕೆಳದರ್ಜೆ ನೌಕರರು) ರಾಷ್ಟ್ರಾಧ್ಯಕ್ಷರಿಗೆ ಮತ್ತು ರಾಜ್ಯಾಂಗಕ್ಕೆ ರಾಜಭಕ್ತಿ ವ್ಯಕ್ತಪಡಿಸುವ ಪ್ರಮಾಣ ಸ್ವೀಕಾರ ಮಾಡಿದರು

ಹಾಸನ— ಗಾಂಧೀನಗರದಲ್ಲಿ ನಾಲ್ಕು ಅಂಗಡಿಗಳಿಗೆ ಶನಿವಾರ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಗಳಷ್ಟು ನಷ್ಟವಾಗಿದೆ

ಬೆಂಬಾಯಿ— ಕಾಶ್ಮೀರದ ಅದೃಷ್ಟವು ನ್ಯೂಯಾರ್ಕಿನ ರಕ್ಷಣಾ ಸಮಿತಿಯಲ್ಲಿ ನಿರ್ಧಾರವಾಗಬಕ್ಕಿದ್ದಲ್ಲವೆಂದೂ, ಆದರೆ ನಿಜವಾದ ರಕ್ಷಣಾ ಸಮಿತಿಯಾದ ಭಾರತದ ಜನತೆಯಿಂದ ನಿರ್ಧಾರವಾಗಬಕ್ಕಿದ್ದೆಂದೂ ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್ ಹೇಳಿದರು

ಬ್ರಿಟ್ಟೈನಿನಲ್ಲಿ ಹೋಟಲುಗಳ ವ್ಯಾಪಾರ

1960 ನೇ ವರ್ಷಕ್ಕೆ ಬ್ರಿಟ್ಟೈನಿನಲ್ಲಿ ಎಲ್ಲ ಹೋಟಲುಗಳು ಒಟ್ಟಿಗೆ 13002ಗಿರಂ ಪವನುಗಳಷ್ಟು ವ್ಯಾಪಾರ ಮಾಡಿವೆ ; ಇದರಲ್ಲಿ ಊಟ ಮತ್ತು ಉಪಹಾರದ ಮೊತ್ತ 381309000 ಪವನುಗಳು ; ಸಿಗರೇಟುಗಳ ಮತ್ತು ಹೊಗೆ ಸೊಪ್ಪು 163062000 ಪವನುಗಳು : ಕೊಠಡಿ ಬಾಡಿಗೆ 81553000 ಪವನುಗಳು ; ಎಲ್ಲಕ್ಕಿಂತಲೂ ಹೆಚ್ಚು ಗಿರಾಕಿಗಳು ಮದ್ಯಗಳಿಗೇ 623319000 ಪವನುಗಳು ; ವಿಹಾರಸ್ಥಳಗಳಲ್ಲಿನ 5395 ಕೇಂದ್ರಗಳಲ್ಲಿನ ಹೋಟಲುಗಳ ವ್ಯಾಪಾರ 179070000 ಪವನುಗಳು.

o o

3 ವರ್ಷಗಳಿಂದ ಮೂರ್ಛೆ

ಇಂಗ್ಲೆಂಡಿನ ಅಕ್ಸ್‌ಫರ್ಡಿನಲ್ಲಿ 1958 ರಲ್ಲಿ ಒಂದು ಮೋಟಾರು ಅವಘಡದಲ್ಲಿ ಮಿಸಾಳಿಗೆ ಆಘಾತವಾಗಿ ಕಳೆದ ಮೂರು ವರ್ಷಗಳಿಂದಲೂ ಆಸ್ಪತ್ರೆಯಲ್ಲಿ ಮೂರ್ಛಾವಸ್ಥೆಯಲ್ಲಿದ್ದ 20 ವರ್ಷ ವಯಸ್ಸಿನ ವೈದ್ಯಕೀಯ ವಿದ್ಯಾರ್ಥಿನಿಯು 15 ದಿವಸಗಳ ಹಿಂದೆ ಗತಪ್ರಾಣಳಾದಳು ; ಕೆಲವೊಮ್ಮೆ ಅಕೆ ಕಣ್ಣಿಂದ ನೋಡುತ್ತಿದ್ದರೂ ಕೈಸನ್ನೆಗಳಿಂದಲೂ ಸಹ ಗುರುತಿಸಲಾಗಿರಲಿಲ್ಲ; ಸದಾ ನಿದ್ರೆಯಲ್ಲೆಂಬಂತೇ ಇರುತ್ತಿದ್ದಳು.

ವುಡ್‌ಲ್ಯಾಂಡ್ಸ್ ಮಹೋನ್ನತ 7ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರೇಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನೋಜ್ಞವಾದ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ ಕೀರ್ತಿಯುತ 4 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI SUDHA

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಆ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.